ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 13-05-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಔಷಧ ನಿಯಂತ್ರಣ ಇಲಾಖೆ ಸುವರ್ಣ ಸಂಭ್ರಮ ಆಚರಣೆ:<br><br>ಉದ್ಘಾಟನೆ::<br><br>ಯು.ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.<br><br>ಮುಖ್ಯ ಅತಿಥಿಗಳು:<br><br>ಡಾ. ಶಾಲಿನಿ ರಜನೀಶ್,<br>ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, | 14-05-2016<br>ಶನಿವಾರ<br>ಬೆಳಿಗ್ಗೆ<br>10-00 ಗಂಟೆಗೆ | ಔಷಧ ನಿಯಂತ್ರಣ ಇಲಾಖೆ ಆವರಣ, ಅರಮನೆ ರಸ್ತೆ, ಬೆಂಗಳೂರು. |
| 2. | ಕರ್ನಾಟಕ ರಾಜ್ಯ ಕೃಷಿ ಇಂಜಿನಿಯರ್‌ಗಳ ಸಮ್ಮೇಳನ:<br><br>ಉದ್ಘಾಟನೆ:<br><br>ಕೃಷ್ಣಭೈರೇಗೌಡ,<br>ಕೃಷಿ ಸಚಿವರು<br><br>ವಿ.ಸೂ: ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ಮೇ 14 ರಂದು ಬೆಳಿಗ್ಗೆ 9-45 ಗಂಟೆಗೆ ಕಬ್ಬನ್ ಉದ್ಯಾನವನದ ಪ್ರೆಸ್ ಕ್ಲಬ್ ಆವರಣದಿಂದ ವಾಹನ ವ್ಯವಸ್ಥೆ ಮಾಡಿದೆ.<br><br>ಸಂಪರ್ಕ:<br><br>ಡಾ. ಕೆ. ಶಿವರಾಮು,<br><br>ಮೊ. ಸಂಖ್ಯೆ: 9972035456 | 14-05-2016<br>ಶನಿವಾರ<br>ಬೆಳಿಗ್ಗೆ<br>10-30 ಗಂಟೆಗೆ | ಡಾ. ಬಾಬುರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಭವನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಜಿ.ಕೆ.ವಿ.ಕೆ. ಬೆಂಗಳೂರು. |

| | | | |
|---|---|---|---|
| 3. | ಕಾರ್ಮಿಕ ಇಲಾಖೆಯಿಂದ ನಿರ್ಮಿಸಿರುವ ಕಲ್ಯಾಣ ಭವನ, ಶ್ರೀ ರಾಜೀವ್ ಗಾಂಧಿ ಕೌಶಲ್ಯ ಭವನ ಉದ್ಘಾಟನೆ:<br><br><u>ಉದ್ಘಾಟಕರು:</u><br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br><br><u>ವೆಬ್‌ಸೈಟ್‌ಗೆ ಚಾಲನೆ:</u><br><br>ಅನಂತಕುಮಾರ್,<br>ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು.<br><br><u>ಸಹಾಯವಾಣಿಗೆ ಚಾಲನೆ:</u><br><br>ಕೆ.ಜೆ. ಜಾರ್ಜ್,<br>ಬೆಂಗಳೂರು ನಗರಾಭಿವೃದ್ಧಿ ಸಚಿವರು.<br><br><u>ವಿವಿಧ ಯೋಜನೆಗಳಿಗೆ ಚಾಲನೆ:</u><br><br>ಪಿ.ಟಿ. ಪರಮೇಶ್ವರ್ ನಾಯ್ಕ್,<br>ಕಾರ್ಮಿಕ ಖಾತೆಯ ರಾಜ್ಯ ಸಚಿವರು | **14–05–2016**<br>ಶನಿವಾರ<br>ಬೆಳಿಗ್ಗೆ<br>**11–00** ಗಂಟೆಗೆ | ಕಲ್ಯಾಣ ಸುರಕ್ಷಾ ಭವನ, ಐ.ಟಿ.ಐ. ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು. . |
| 4. | **<u>Press Meet:</u>**<br><br>**K. Jairaj,**<br>**Administrator**<br>**Sri Vyasaraja Mutt.** | **15–05–2016**<br>**Sunday**<br>**at**<br>**11.00 am** | **Mutt Premises,**<br>**Benne Govindappa Road,**<br>**Basavanagudi,**<br>**Bengaluru – 560 004.** |
| 5. | ರಾಜ್ಯಮಟ್ಟದ ಚರ್ಮ ಕರಕುಶಲ ವಸ್ತು ಪ್ರದರ್ಶನ ಮತ್ತು ಮಾರಾಟ ಉದ್ಘಾಟನಾ ಸಮಾರಂಭ:<br><br><u>ಉದ್ಘಾಟನೆ:</u><br><br>ಹೆಚ್. ಆಂಜನೇಯ,<br>ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.<br><br><u>ವಸ್ತು ಪ್ರದರ್ಶನ ಉದ್ಘಾಟನೆ:</u><br><br>ಡಾ. ಜಿ. ಪರಮೇಶ್ವರ್,<br>ಗೃಹ ಸಚಿವರು.<br><br><u>ಮುಖ್ಯ ಅತಿಥಿಗಳು:</u> | **16–05–2016**<br>ಸೋಮವಾರ<br>ಬೆಳಿಗ್ಗೆ<br>**11–00** ಗಂಟೆಗೆ | ಶಿಲ್ಪಕಲಾಂಗಳ, ಫ್ರೀಡಂ ಪಾರ್ಕ್ ಶೇಷಾದ್ರಿ ರಸ್ತೆ, ಬೆಂಗಳೂರು. |

| | | | |
|---|---|---|---|
| | ಕೆ. ಜೆ. ಜಾರ್ಜ್,<br>ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು.<br><br>ವಿ. ಶ್ರೀನಿವಾಸ ಪ್ರಸಾದ್,<br>ಕಂದಾಯ ಸಚಿವರು.<br><br>ಡಾ. ಹೆಚ್.ಸಿ. ಮಹದೇವಪ್ಪ,<br>ಲೋಕೋಪಯೋಗಿ ಸಚಿವರು.<br><br>ಅಧ್ಯಕ್ಷತೆ:<br><br>ದಿನೇಶ್ ಗುಂಡೂರಾವ್,<br>ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು. | | |

ನಿರ್ದೇಶಕರ ಪರವಾಗಿ

ವಾರ್ತಾ ವಿಶೇಷ:

### ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಅನಿಸಿಕೆ:

## ಇಟ್ಟ ಹೆಜ್ಜೆ–ದಿಟ್ಟ ನಡೆ– ರಾಜ್ಯ ಸರ್ಕಾರದ ಕ್ರಮಕ್ಕೆ ಫಲಾನುಭವಿಗಳ ಶ್ಲಾಘನೆ

**ಕಟ್ಟುವೆವು ನಾವು,**
**ಹೊಸ ನಾಡೊಂದನು**
**ರಸದ ಬೀಡೊಂದನು**

ಶ್ರೀ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರ್ಕಾರಕ್ಕೆ ಇದೀಗ ಮೂರು ವರ್ಷ ತುಂಬಿ ಇಂದು ನಾಲ್ಕನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕೈಗೊಂಡಿರುವ ಹತ್ತು ಹಲವು ಉಪಯುಕ್ತ ಯೋಜನೆಗಳ ಬಗ್ಗೆ ಸರ್ಕಾರದಿಂದ "ಜನ–ಮನ" ಜನಾಭಿಪ್ರಾಯ ಸಮಾವೇಶವು ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಡಿಯಲ್ಲಿ ಬೆಂಗಳೂರಿನ ಗಾಂಧೀ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಡೆದಿದೆ. ಇದಕ್ಕಾಗಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ವಿವಿಧ ಯೋಜನೆಗಳ ಫಲಾನುಭವಿಗಳು ಬೆಂಗಳೂರಿಗೆ ಆಗಮಿಸಿದ್ದು ಸಮಾವೇಶದಲ್ಲಿ ಮುಖ್ಯಮಂತ್ರಿಗಳಿಗೆ ನೇರವಾಗಿ ಯೋಜನೆಗಳ ಬಗ್ಗೆ ಅನುಭವ, ಅಭಿಪ್ರಾಯ ಹಾಗೂ ತಮ್ಮ ನೇರ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದು ಮುಂಜಾನೆ ಗಾಂಧೀ ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿದಾಗ ಅಲ್ಲಿ ಫಲಾನುಭವಿಗಳು ಯೋಜನೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು, ಅನಿಸಿಕೆಗಳನ್ನು ವ್ಯಕ್ತಿಪಡಿಸಿದರು. ಅವುಗಳನ್ನು ರಾಜ್ಯದ ಜನರ ಮುಂದಿಡುವುದೇ ಈ ಬರಹದ ಉದ್ದೇಶ.

ಅನ್ನಭಾಗ್ಯ:

ಬಡಜನರು ಯಾರ ಬಳಿಯೂ ಅನ್ನಕ್ಕಾಗಿ ಕೈ ಚಾಚದೆ ಸ್ವಾಭಿಮಾನದ ಬದುಕನ್ನು ಸಾಗಿಸಬೇಕೆನ್ನುವುದು ಸರ್ಕಾರದ ಆಶಯ. ಇಂತಹ ಯೋಜನೆಯಿಂದ ಬಡ ಜನರ ಪೌಷ್ಠಿಕತೆ ಕೂಡ ಉತ್ತಮಗೊಳ್ಳಲಿದೆ. ಅಲ್ಲದೆ ಕಡು ಬಡವರು ಆಹಾರ ಧಾನ್ಯ ಖರೀದಿಯಲ್ಲಿ ಉಳಿಸುವ ಹಣ ಅವರ ಇತರ ಅಗತ್ಯಗಳಿಗೆ ನೆರವಾಗುವುದೇ ಅನ್ನಭಾಗ್ಯ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಗ್ರಾಮದಿಂದ ಬಂದಿದ್ದ ಬಸವರಾಜ ಮಲ್ಲನಾಯಕ ಅವರು ಅನ್ನಭಾಗ್ಯ ಯೋಜನೆಯ ಫಲಾನುಭವಿಗಳು. ಈ ಹಿಂದೆ ದುಖಾನುಗಳಲ್ಲಿ ದವಸ ಧಾನ್ಯಕೊಳ್ಳಲು ದುಡ್ಡಿನ ಕೊರತೆಯಿಂದ ಸಂಕಷ್ಟದಲ್ಲಿದ್ದೆವು. ಇಂದು ಈ ಸರ್ಕಾರ ಬಂದು ನಮಗೆ ನಿಜಕ್ಕೂ ಅನ್ನಭಾಗ್ಯ ನೀಡಿದೆ. ಎರಡು ಹೊತ್ತು ಹಸಿದ ಹೊಟ್ಟೆ ತುಂಬಿಸಿಕೊಳ್ಳುವ ಅವಕಾಶ ಮಾಡಿಕೊಟ್ಟಿದೆ ಎಂದು ಹೇಳಿದರು.

ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಮುಗಳಿ ಗ್ರಾಮದ ಶ್ರೀಮತಿ ಸುಮಂಗಲ ಎಸ್. ಬೆಟಗೇರಿ ಅವರು ಕೃಷಿ ಕಾರ್ಯ ಮಾಡುವ ಮಹಿಳೆ. ತಮ್ಮ ಆದಾಯದಲ್ಲಿ ಮಾರುಕಟ್ಟೆಗೆ ಹೋಗಿ ಧಾನ್ಯ ಕೊಳ್ಳುವಷ್ಟು ಆದಾಯ ಇರಲಿಲ್ಲ. ಅದೇ ರೀತಿ ನೇತ್ರಾವತಿ ಚಂದ್ರಶೇಖರ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಗೊಂಬಿ ಗ್ರಾಮದ ಕೃಷಿ ಮಹಿಳೆ ಈಕೆಯದು ಆರ್ಥಿಕ ಸಮಸ್ಯೆ. ಇವರಿಗೆ ಅನ್ನಭಾಗ್ಯ ಯೋಜನೆ ವರವಾಗಿ ಪರಿಣಮಿಸಿದೆ. ಆ ಮಹಿಳೆಯರ ಮಾತುಗಳಲ್ಲೇ ಹೇಳುವುದಾದರೆ "ರಾಜ್ಯ ಸರ್ಕಾರ ಉಚಿತ ಅಕ್ಕಿ, ಗೋಧಿಯ ಜೊತೆ, ಉಪ್ಪು, ಅಡಿಗೆ ಎಣ್ಣೆ ನೀಡುತ್ತಿದೆ. ಮಾರುಕಟ್ಟೆಯಲ್ಲಿ ಹನ್ನೊಂದು ರೂಪಾಯಿಗಳಿಗೆ ದೊರಕುವ ಉಪ್ಪು ನಮಗೆ ಎರಡು ರೂ.ಗೆ, ಐವತ್ತು ರೂಪಾಯಿಯ ತಾಳೆಎಣ್ಣೆ 25/- ರೂಪಾಯಿಗಳಿಗೆ ಹಾಗೂ ಮಾರುಕಟ್ಟೆಯಲ್ಲಿ 40 ರೂ.ಗಳಿಗೆ ಇರುವ ಸಕ್ಕರೆಯನ್ನು ರಾಜ್ಯ ಸರ್ಕಾರ 13.50 ರೂ.ಗಳಿಗೆ ನೀಡುತ್ತಿದೆ. ಇದು ನಮ್ಮ ದುಸ್ತರ ಬದುಕನ್ನು ಹಸನುಗೊಳಿಸಿದೆ".

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಕಡಕೇರಿ ಗ್ರಾಮದ ದೇವರಾಜ ನಾರಾಯಣ ನಾಯಕ ಅವರು ಸಹ ಅನ್ನಭಾಗ್ಯದ ಫಲಾನುಭವಿಗಳು. ಸಂಕಷ್ಟದಲ್ಲಿದ್ದ ಬಡವರ ಬದುಕು ಸರ್ಕಾರದ ಅನ್ನಭಾಗ್ಯ ಯೋಜನೆಯನ್ನು ಇಂದು ಸಹನೀಯವಾಗಿಸಿದೆ ಎನ್ನುತ್ತಾರೆ. ಕೊಪ್ಪಳ ಜಿಲ್ಲೆಯ ವಿಶಾಲಾಕ್ಷಮ್ಮ ಮತ್ತು ಯಂಕಮ್ಮ ಇವರುಗಳು ಸಹಾ ಅನ್ನಭಾಗ್ಯ ಯೋಜನೆಯ ಫಲಾನುಭವಿಗಳಾಗಿದ್ದು ಯೋಜನೆಯ ಬಗ್ಗೆ ಉತ್ತಮ ಅಭಿಪ್ರಾಯಗಳನ್ನು ನೀಡಿದರು.

ಕ್ಷೀರಭಾಗ್ಯ:

ಶಾಲಾ ಮಕ್ಕಳಿಗೆ ಬಿಸಿಹಾಲು ಪೂರೈಸುವ ಸರ್ಕಾರದ ಮಹತ್ವಾಕಾಂಕ್ಷೆಯ ಕ್ಷೀರಭಾಗ್ಯ ಯೋಜನೆ ರಾಜ್ಯಾದ್ಯಂತ ಅನುಷ್ಠಾನಗೊಂಡಿದೆ. ಮಕ್ಕಳಲ್ಲಿ ಪೌಷ್ಠಿಕತೆ ಹೆಚ್ಚಿಸುವ ಸದುದ್ದೇಶದಿಂದ ಸರ್ಕಾರ ಜಾರಿಗೆ ತಂದ ಈ ಯೋಜನೆಯಿಂದ ಅಂಗನವಾಡಿ ಮಕ್ಕಳೂ ಸೇರಿದಂತೆ 1 ರಿಂದ 10 ನೇ ತರಗತಿ ವರೆಗಿನ ಒಂದು ಕೋಟಿಗೂ ಅಧಿಕ ಮಕ್ಕಳಿಗೆ ಪ್ರಯೋಜನವಾಗುತ್ತಿದೆ.

ಹಾವೇರಿ ಜಿಲ್ಲೆಯ ಕುರಬಗೊಂಡ ಶಾಲೆಯ ಕುಮಾರಿ ಕೀರ್ತಿ ಆನಂದ್ ದೊಡ್ಡಗೌಡರ್ 7ನೆಯ ತರಗತಿಯ ವಿದ್ಯಾರ್ಥಿನಿ, ಅದೇ ಹಾವೇರಿ ಜಿಲ್ಲೆಯ ವರದಹಳ್ಳಿ ಗ್ರಾಮದ 8ನೇ ತರಗತಿಯ 14 ವರ್ಷದ ಕುಮಾರಿ ರಕ್ಷಿತ ಮಲ್ಲೇಶಪ್ಪ ಹಡಪದ್ ಕ್ಷೀರಭಾಗ್ಯ ಯೋಜನೆಯ ಫಲಾನುಭವಿಗಳು. ಬೆಳಗಾಗೆದ್ದು ಮನೆಯ

ಕೆಲಸ ಮುಗಿಸಿ ಒಂದು ತುತ್ತು ಉಂಡು ಶಾಲೆಗೆ ಬಂದರೆ ಮತ್ತೆ ಊಟ ಕಾಣುತ್ತಿದ್ದುದು ರಾತ್ರಿಯೇ. "ಶಾಲೆಯಲ್ಲಿ ಅಪೌಷ್ಠಿಕತೆಯಿಂದಾಗಿ, ಹಸಿವಿನಿಂದಾಗಿ, ರಕ್ತ ಹೀನತೆಯಿಂದಾಗಿ ಬಳಲಿ ಹೋಗುತ್ತಿದ್ದೆವು. ಹಾಲು ಮನೆಯಲ್ಲಿ ಕೊಳ್ಳುವಷ್ಟು ಶಕ್ತರಾಗಿರಲಿಲ್ಲ. ಈಗ ವಾರದಲ್ಲಿ ಮೂರುದಿನ ಮಧ್ಯಾಹ್ನ ಶಾಲೆಯಲ್ಲಿಯೇ ಬಿಸಿ ಹಾಲು ಕೊಡುತ್ತಿದ್ದು ಮಧ್ಯಾಹ್ನದ ನಂತರ ಶಾಲೆಯಲ್ಲಿ ಉತ್ಸಾಹದಿಂದ ಪಾಠ ಕಲಿಯಲು ಅನುಕೂಲವಾಗುತ್ತಿದೆ ಎಂದು ಹೇಳುತ್ತಾರೆ.

ಬಳ್ಳಾರಿ ಜಿಲ್ಲೆ ಸಂಜೀವರಾಯನ ಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹುಲುಗಪ್ಪ ಮತ್ತು ಎರಿಸ್ವಾಮಿ ವಿದ್ಯಾರ್ಥಿಗಳು ಕ್ಷೀರಭಾಗ್ಯ ಯೋಜನೆಯ ಕಂದಮ್ಮಗಳು. ಅವರ ಮುಖದಲ್ಲಿ ಬಡತನ ಎದ್ದುಕಾಣುತ್ತಿತ್ತು. "ಸಾ ನಮಗೆ ಸ್ಕೂಲಲ್ಲಿ ಸೋಮವಾರ, ಬುಧವಾರ, ಶುಕ್ರವಾರ ಹಾಲು ಕೊಡ್ತಾರೆ ಸಾ ನಿಜವಾಗಲೂ ನಮಗೆ ಇಷ್ಟ ಆಗೈತ್ ಸಾ" ಎಂದರು.

ರಾಯಚೂರಿನ ಪೊಲೀಸ್ ಕಾಲೋನಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಕುಮಾರಿ ಸಂಧ್ಯಾ ಹಾಗೂ ರಾಯಚೂರಿನ ಲಾಲ್‌ಬಹದ್ದೂರ್ ಶಾಸ್ತ್ರೀ ನಗರದ ಸುಮಾ ಕ್ಷೀರಭಾಗ್ಯ ಯೋಜನೆಯ ಫಲಾನುಭವಿಗಳು. ಮೂರು ದಿನ ಮೇಡಂ ಕೊಡುವ ಬಿಸಿ ಹಾಲನ್ನು ಸಂತೋಷದಿಂದ ಕುಡಿಯುವುದಾಗಿ ಹೇಳಿಕೊಂಡರು.

ಮೈತ್ರಿ ಯೋಜನೆ:

ಸಮಾಜದಲ್ಲಿ ನಿರ್ಲಕ್ಷಕ್ಕೆ ಒಳಗಾಗಿರುವ ಲಿಂಗ ಅಲ್ಪಸಂಖ್ಯಾತರಿಗಾಗಿ ರಾಜ್ಯ ಸರ್ಕಾರ ಮೈತ್ರಿ ಯೋಜನೆಯನ್ನು ರೂಪಿಸಿದೆ.

ವಿಜಯಪುರದ (ಬಿಜಾಪುರ) ಸತೀಶ್ ಮತ್ತು ಶಬ್ಬೀರ್ ಲಿಂಗತ್ವ ಅಲ್ಪ ಸಂಖ್ಯಾತರು. ಮೈತ್ರಿ ಯೋಜನೆ ಜಾರಿಗೆ ಬಂದಮೇಲೆ ನಾವು ಮುಖ್ಯ ವಾಹಿನಿಗೆ ಬರುವಂತಾಗಿದ್ದೇವೆ. ಸರ್ಕಾರ ನೀಡುತ್ತಿರುವ ಪ್ರಾಥಮಿಕ ಸೌಲಭ್ಯ ಸಂತಸ ತಂದಿದೆಯಾದರೂ ಇನ್ನೂ ಹೆಚ್ಚಿನ ಸೌಲಭ್ಯ ನೀಡಲಿ ಎಂಬುದು ನಮ್ಮ ಆಶಯ ಎಂದರು.

ಕೃಷಿ ಭಾಗ್ಯ:

ಅನ್ನದಾತನ ಜಮೀನಿಗೆ ನೀರೊದಗಿಸುವ ಉದ್ದೇಶದಿಂದ ಸರ್ಕಾರವು ಕೃಷಿ ಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಮುಂಗಾರು ಮಳೆಯನ್ನೇ ನಂಬಿದ ರೈತ ಬರಡು ನೆಲವನ್ನು ನೋಡುತ್ತಾ ಕುಳಿತುಕೊಳ್ಳಬೇಕಾದ ದುಸ್ಥಿತಿ ಇತ್ತು. ಈ ನಿಟ್ಟಿನಲ್ಲಿ ರೈತರ ಜಮೀನಿನಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿ ನೀರು ಶೇಖರಿಸಿ ಜಮೀನಿನಲ್ಲಿ ಸರಾಗವಾಗಿ ಬೆಳೆ ತೆಗೆಯುವ ಫಲಪ್ರದ ಯೋಜನೆಯೇ ಕೃಷಿ ಹೊಂಡದ್ದು.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಗಿರಿಗಾವ್‌ನ ಮಹದೇವ ಬಾಬು ಚೌಗಲೆ ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳು. ಇವರಿಗೆ ಕೃಷಿ ಭಾಗ್ಯ ನೆಮ್ಮದಿ ಕೊಟ್ಟಿದೆ.

ಬಾಗಲಕೋಟೆ ಜಿಲ್ಲೆಯ ಶಿರಸೂರು ಗ್ರಾಮದ ರೈತ ಶ್ರೀ ಬಸಲಿಂಗಪ್ಪ ಗುಗ್ಗಿ ಅವರು ಹೇಳಿದ್ದು ಹೀಗೆ" ನಮ್ಮ ಭಾಗದಲ್ಲಿ ಕಳೆದ ಎರಡು ವರ್ಷಗಳಿಂದ ಮಳೆ ಇಲ್ಲ. ಸಂಕಷ್ಟದಲ್ಲಿದ್ದೆವು. ಕೃಷಿ ಹೊಂಡದಿಂದಾಗಿ ನಮ್ಮ ಜಮೀನು ಹಸನಾಯಿತು. ಉತ್ತಮ ಬೆಳೆ ತೆಗೆದು ನೆಮ್ಮದಿಯ ಬದುಕಿಗೆ ದಾರಿಯಾಯಿತು. ಗ್ರಾಮಕ್ಕೊಂದು

ಕೃಷಿ ಹೊಂಡದ ಬದಲು ರಾಜ್ಯದ ಎಲ್ಲ ರೈತರ ಜಮೀನುಗಳಲ್ಲೂ ಕೃಷಿ ಹೊಂಡ ಮಾಡಿದರೆ ಸರ್ಕಾರ ರೈತರಿಗೆ ಇದಕ್ಕಿಂತ ಒಳ್ಳೇ ಭಾಗ್ಯ ನೀಡಲು ಸಾಧ್ಯವಿಲ್ಲ". ಎಂದರು. ಯಲಬುರ್ಗಾದ ತಹಕಲ್ ಗ್ರಾಮದ ಸಿದ್ದನಗೌಡ ತೋಟಯ್ಯ ಅವರು ಕೃಷಿ ಭಾಗ್ಯದಿಂದ ನಮಗೆ ಅನುಕೂಲವಾಗಿದೆ. "ಎಲ್ಲ ಭಾಗ್ಯಗಳಿಗಿಂತ ಇದು ಹೆಚ್ಚಿನ ಭಾಗ್ಯ ತಂದು ಕೊಟ್ಟಿದೆ. ಸರ್ಕಾರವು ಇನ್ನೂ ಒಂದು ಸಾವಿರ ಹೊಂಡ ನಮ್ಮಲ್ಲಿ ತೆಗೆಯುವ ಯೋಜನೆ ಇಟ್ಟುಕೊಂಡಿದೆ. ಈ ಯೋಜನೆಯಿಂದ ಭೂಮಿ ತಂಪಾಗುವುದಲ್ಲದೆ ಅಂತರ್ಜಲವು ಅಭಿವೃದ್ಧಿಯಾಗಲಿದೆ ಎಂದರು.

ವಸತಿ ಯೋಜನೆ:

ರಾಜ್ಯವನ್ನು ಗುಡಿಸಲು ಮುಕ್ತವನ್ನಾಗಿಸಲು ಸರ್ಕಾರ ಸಂಕಲ್ಪಿಸಿದ್ದು 12 ಲಕ್ಷಕ್ಕೂ ಹೆಚ್ಚು ಮನೆಗಳ ನಿರ್ಮಾಣದ ಗುರಿ ಹಾಕಿಕೊಂಡಿದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರಿಗೆ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಆದ್ಯತೆ ನೀಡಿದೆ.

ಹಾವೇರಿ ಜಿಲ್ಲೆ ಹೊಸ ಕಿತ್ತೂರು ಗ್ರಾಮದ ಶ್ರೀಮತಿ ಸುಜಾತ ಮತ್ತು ಅದೇ ಜಿಲ್ಲೆಯ ದೇವಿ ಹೊಸೂರು ಗ್ರಾಮದ ಶ್ರೀಮತಿ ಚಂದ್ರಕಲಾ ಬಸವ ವಸತಿ ಯೋಜನೆಯ ಫಲಾನುಭವಿಗಳು. ಬಾಡಿಗೆ ಮನೆಗಳಲ್ಲಿ ವಾಸವಿದ್ದು ಬಾಡಿಗೆ ಕಟ್ಟಲಾಗದೆ ಸಂಕಷ್ಟದಲ್ಲಿದ್ದೆವು. ಇಂದು ಬಸವ ವಸತಿ ಯೋಜನೆ ಮೂಲಕ ರಾಜ್ಯ ಸರ್ಕಾರ ನಮಗೆ ನೆರಳಿನ ಗೂಡು ನೀಡಿದೆ ಎನ್ನುತ್ತಾರೆ. ಬಳ್ಳಾರಿ ಜಿಲ್ಲೆಯ ಸಿರಿವಾರ ಗ್ರಾಮದ ರೇಣುಕಮ್ಮ ಮತ್ತು ಗಂಗಮ್ಮ ನಮಗೆ ಜನತಾ ಮನೆ ನೀಡುವ ಮೂಲಕ ಸರ್ಕಾರ ನೆರಳು ನೀಡಿದೆ.

ವಿದ್ಯಾಸಿರಿ:

ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಅತಿ ಹೆಚ್ಚಿನ ಬೇಡಿಕೆ ಇರುವುದರಿಂದ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ದೊರಕದ ಕಾರಣ ಮೆರಿಟ್ ಹೊಂದಿರುವ ವಿದ್ಯಾರ್ಥಿಗಳಿಗೆ ಊಟ ವಸತಿ ಸಹಾಯ ಯೋಜನೆಯನ್ನು ವಿದ್ಯಾಸಿರಿ ಹೆಸರಿನಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಆದರ್ಶ ಎಂಬ ವಿದ್ಯಾಸಿರಿ ಫಲಾನುಭವಿ ಹಾಸ್ಟೆಲ್‌ನಲ್ಲಿ ಸ್ಥಳ ದೊರೆಯಲಿಲ್ಲ. ನನ್ನ ಶಿಕ್ಷಣದ ಭವಿಷ್ಯ ಚಿಂತೆಗೀಡುಮಾಡಿತ್ತು. ವಿದ್ಯಾಸಿರಿ ಯೋಜನೆಯಿಂದಾಗಿ ಇಂದು ನೆಮ್ಮದಿಯಿಂದ ವಿದ್ಯಾಭ್ಯಾಸ ಮಾಡುತ್ತಿದ್ದೇನೆ ಎಂದರು.

ಕೊಪ್ಪಳದ ಗವಿಸಿದ್ದೇಶ್ವರ ಕಾಲೇಜಿನ ಬಸವರಾಜ ವಿದ್ಯಾಸಿರಿ ಅಡಿ ದೊರಕುತ್ತಿರುವ ಸೌಲಭ್ಯಕ್ಕೆ ಸಂತಸ ವ್ಯಕ್ತಪಸಿದರಾದರೂ ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡುವುದಾಗಿ ಹೇಳಿದರು. ಗುಲಬರ್ಗಾ ಜಿಲ್ಲೆಯ ಶಹಾಪೂರ ತಾಲ್ಲೂಕಿನ ದಸ್ತಾಪುರ್ಕಿ ಗ್ರಾಮ ಶಕುಂತಲಾ ಅವರು ಸರ್ಕಾರವು ವರ್ಷಕ್ಕೆ ಸರಿ ಸುಮಾರು 15 ಸಾವಿರ ರೂಪಾಯಿಗಳನ್ನು ನೀಡುತ್ತಿದೆ. ವಿದ್ಯಾರ್ಥಿನಿಯರ ವಿಧ್ಯಾಭ್ಯಾಸಕ್ಕೆ ಅನುಕೂಲವಾಗಿದೆ ಎಂದರು.

ಕ್ಷೀರಧಾರೆ:

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸುಮಾರು 7.5 ಲಕ್ಷ ಕುಟುಂಬಗಳು ಹೈನುಗಾರಿಕೆ ಅವಲಂಬಿಸಿದೆ. ರಾಜ್ಯ ಸರ್ಕಾರವು ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹಧನವನ್ನು 2 ರಿಂದ 4 ರೂ.ಗಳಿಗೆ ಏರಿಕೆ ಮಾಡಿದೆ.

ಕೊಪ್ಪಳದ ಮಲ್ಲಪ್ಪ ಹಿರೇಸಿಂಧೋಗಿ ಅವರು ಕ್ಷೀರಧಾರೆಯ ಫಲಾನುಭವಿಗಳು. ಪ್ರೋತ್ಸಾಹಧನ 4 ರೂ. ಏರಿಸಿರುವುದರಿಂದ ರೈತ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಿಸಿದೆ. ರಾಜ್ಯದಲ್ಲಿ ಹೈನುಗಾರಿಕೆಗೆ ಇನ್ನೂ ಹೆಚ್ಚು ಪ್ರೋತ್ಸಾಹ ನೀಡಿ, ಪ್ರೋತ್ಸಾಹಧನವನ್ನು ಇನ್ನೂ 2 ರೂ. ಹೆಚ್ಚಿಸಿದಲ್ಲಿ ರೈತರಿಗೆ ಇನ್ನೂ ನೆಮ್ಮದಿ ತರುವುದು ಎಂದರು.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುರಗೋಡಿನ ಶಿವಾನಂದ ಕುಂಬಾರ ಅವರು ಹಿಂದುಳಿದ ವರ್ಗದವರಿಗಾಗಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು 30,000/- ರೂ.ಗಳ ಸಾಲದ ನೆರವು ನೀಡಿದೆ. ನಶಿಸುತ್ತಿರುವ ಕುಂಬಾರಿಕೆ ಉಳಿಸಿ ಬೆಳೆಸುವ ಯತ್ನದಲ್ಲಿ ಸರ್ಕಾರವು ಪ್ರೋತ್ಸಾಹ ನೀಡಿದೆ. ಅಲ್ಲದೆ ನನಗೆ ನೀಡಿದ ಸಾಲ ಮನ್ನಾ ಮಾಡಿದ ಪರಿಣಾಮವಾಗಿ ಇಂದು ನಾನು ಹೆಚ್ಚು ಅಭಿವೃದ್ಧಿ ಹೊಂದಿದ್ದೇನೆ ಎಂದರು.

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಹೊಳೆ ಹಿಟಗಿ ಗ್ರಾಮದ ಹಿಟ್ಟಪ್ಪ ಅಜ್ಜಪ್ಪ ತಳವಾರ ಅವರು ಪದವೀಧರನಾಗಿದ್ದು ನಿರುದ್ಯೋಗ ಸಮಸ್ಯೆಯಲ್ಲಿದ್ದರು. ಇವರು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೋಳಿ ಸಾಕಾಣಿಕೆಗಾಗಿ ಸಾಲ ಪಡೆದಿದ್ದು ಅಭಿವೃದ್ಧಿ ಪಥದಲ್ಲಿದ್ದಾಗಲೇ ಸಾಲ ಮನ್ನಾವಾಯಿತು.

ಗದಗದ ವೆಂಕಟೇಶ್ ತಿಪ್ಪಣ್ಣ ರಾಂಪೂರ ಅವರು ಶ್ರಮ ಶಕ್ತಿ ಯೋಜನೆಯಡಿ ಕುಶಲ ಕರ್ಮಿಯಾಗಿ ತಲೆ ತಲಾಂತರದಿಂದ ಬಂದಿದ್ದ ಕ್ಷೌರಿಕ ವೃತ್ತಿಯನ್ನು ಆಧುನಿಕ ಕಾಲಕ್ಕೆ ತಕ್ಕಂತೆ ನವೀಕರಿಸಿಕೊಳ್ಳಲು ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ 30,000 ರೂ.ಗಳ ಸಾಲ ಪಡೆದು ಈಗ ಅಭಿವೃದ್ಧಿ ಹೊಂದಿದ್ದಾರೆ. ಸಾಲವು ಮನ್ನಾವಾಗಿದೆ. ಇಂದು ಅವರ ಮುಖದಲ್ಲಿ ಸಂತಸದ ನಗು ಕಾಣುತ್ತಿದೆ.

ಹೀಗೆ ಕರ್ನಾಟಕ ರಾಜ್ಯ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ಸಾಧಿಸಿರುವ ಯಶಸ್ಸಿನ ಕಥೆಗಳು ಫಲಾನುಭವಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅಂತಹವರ ಬದುಕು ಯೋಜನೆಗಳ ಅನುಭವದ ಬಳಕೆ ನೊಂದವರ ಬಾಳಿಗೆ ಬೆಳಕಾಗಬಲ್ಲದು ಎಂಬುದು ನಮ್ಮ ಆಶಯ.

ಸಂದರ್ಶನ ಮತ್ತು ಬರಹ
ಮಂಜುನಾಥ ಬಾಬು ಟಿ.ಸಿ. ಮತ್ತು ಎಂ. ಕೇಶವಮೂರ್ತಿ

# ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

ಬೆಂಗಳೂರು, ಮೇ 13 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ: 15-05-2016ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು

ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ **"ಉದ್ಯಾನವನದಲ್ಲಿ ಉದಯರಾಗ"** ಎಂಬಶೀರ್ಷಿಕೆಯಡಿ
   ಶ್ರೀ ರವಿ.ಡಿ.ಕೆ. ಮತ್ತು ತಂಡದವರು ಮಹಲಿಂಗಪುರ, ಬಾಗಲಕೋಟೆ ಜಿಲ್ಲೆ ರವರಿಂದ ಚೌಡಿಕೆ ಪದಗಳ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2. ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ **"ಉದ್ಯಾನವನದಲ್ಲಿ ಸಂಧ್ಯಾರಾಗ"** ಎಂಬ ಶೀರ್ಷಿಕೆಯಡಿ ಶ್ರೀ ರಾಜೇಶ್ ಮತ್ತು ತಂಡದವರು ಚಂದಾಪುರ, ಆನೇಕಲ್ ತಾಲ್ಲೂಕು ರವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
3. ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4. ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ(ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
5. ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ Cut Fruits, Dry Fruits ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6. ಉದ್ಯಾನವನದ ಆವರಣದಲ್ಲಿ ದಿ ನರ್ಸರಿಮೆನ್ ಕೋ–ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಬೆಂಗಳೂರುರವರು ವಿವಿಧ ಅಲಂಕಾರಿಕ ಗಿಡಗಳು ಮತ್ತು ಉದ್ಯಾನವನ ಸಲಕರಣೆಗಳ ಮಾರಾಟವನ್ನು ಕೈಗೊಳ್ಳುತ್ತಾರೆ.

7. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

## ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

### I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- **ಬೆಳಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಶ್ರೀಮತಿ ಪ್ರತಿಭಾಹೆಗಡೆ ರವರಿಂದ ಹಿಂದೂಸ್ಥಾನಿ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಬೆಳಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ ಶ್ರೀ ವಾಣಿ ವಿದ್ಯಾ ಕೇಂದ್ರ, ಬಸವೇಶ್ವರನಗರ, ಬೆಂಗಳೂರು ಶಾಲಾ ಮಕ್ಕಳಿಂದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

### II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

- ಬೆಳಗ್ಗೆ 6.00 ರಿಂದ 12.00 ಘಂಟೆಯವರೆಗೆ ವಿಧ್ಯಾರಣ್ಯ ಸಂಸ್ಥೆಯು ನಡೆಸುತ್ತಿರುವ ಉಜ್ವಲ ಕೇಂದ್ರದ ಫಲಾನುಭವಿಗಳು ತಯಾರಿಸಿದ ವಿವಿಧ ಆಭರಣ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- **ಬೆಳಗ್ಗೆ 7.00 ರಿಂದ 10.00 ಘಂಟೆಯವರೆಗೆ ಯೋಗ ಪ್ರಾಣ ವಿದ್ಯಾ ಸಂಸ್ಥೆಯ Soham Healing Center, ಆರ್.ಟಿ. ನಗರ ಬೆಂಗಳೂರು ರವರ ವತಿಯಿಂದ ಪ್ರಾಣ ಚಿಕಿತ್ಸೆ ನೀಡುವ ಕಾರ್ಯಕ್ರಮವನ್ನು ಉಚಿತವಾಗಿ ಏರ್ಪಡಿಸಲಾಗಿದೆ.**

  **ಬಾಬು/ಕೆಎಂ**

## ಸಾರಿಗೆ ಅದಾಲತ್

**ಬೆಂಗಳೂರು, ಮೇ 13 (ಕರ್ನಾಟಕ ವಾರ್ತೆ)**

**ದಿನಾಂಕ: 18–05–2016 ರ ಬುಧವಾರ ಮಧ್ಯಾಹ್ನ 3–00 ಗಂಟೆಗೆ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಕಚೇರಿ, ಬೆಂಗಳೂರು (ದಕ್ಷಿಣ), ಜಯನಗರ ಇಲ್ಲಿ ಸಾರಿಗೆ ಅದಾಲತ್‌ನ್ನು ಕಚೇರಿಯ 2ನೇ ಮಹಡಿಯ ಅಡಿಟೋರಿಯಂನಲ್ಲಿ ಏರ್ಪಡಿಸಲಾಗಿದೆ. ಆದಾಲತ್‌ನಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಮತ್ತು ಕುಂದು ಕೊರತೆ ಪರಿಹಾರಕ್ಕಾಗಿ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲು ಕೋರಿದೆ.**

**ಬಾಬು:ಜಿಪಿಆರ್.**

## SARIGE ADLAT

**Bengaluru, May 13th (Karnataka Information)**

**Sarige Adalat will be held on Monday 18-05-2016 at 3.00 pm in the 2nd floor, Auditorium by the Office of the Deputy Commissioner for Transport and Senior Regional Transport Officer, Bangalore (South) Jayanagar. Senior Officers of the Transport Department will be participating in the adalat. Publics are requested to avail this opportunity for redressal of their grievances, if any in the adalat.**

**babu:gpr.**

## ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

**ಬೆಂಗಳೂರು, ಮೇ 13 (ಕರ್ನಾಟಕ ವಾರ್ತೆ)**

**ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 201–02–2015 ರಲ್ಲಿ ಅಧಿಸೂಚಿಸಿರುವ ತೋಟಗಾರಿಕೆ ಇಲಾಖೆಯಲ್ಲಿನ ತೋಟಗಾರಿಕೆ ಸಹಾಯಕರ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು**

ದಿನಾಂಕ 12-05-2016 ರಂದು ಆಯೋಗದ ಅಂತರ್ಜಾಲ **http://kpsc.kar.nic.in/Selection List/Provisional Selection List** ರಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಅಭ್ಯರ್ಥಿಗಳು ಆಕ್ಷೇಪಣೆಗಳನ್ನು ಆಯ್ಕೆ ಪಟ್ಟಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರಿಗೆ ಸಲ್ಲಿಸಬಹುದು.

ಬಾಬು:ಪೂರ್ಣಿಮಾ:ಜಿಪಿಆರ್.

# ಕಾರ್ಯಗಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಮೇ 13 (ಕರ್ನಾಟಕ ವಾರ್ತೆ)

ಕನ್ನಡ ಪುಸ್ತಕ ಪ್ರಾಧಿಕಕಾಋುವು 40 ವರ್ಷ ವಯೋಮಾನದೊಳಗಿನ ದಲಿತ ಯುವ ಲೇಖಕಿಯರಿಗಾಗಿ "ದಲಿತ ಸಾಹಿತ್ಯ ಹಾಗೂ ಪ್ರಕಟಣಾ ಕ್ಷೇತ್ರದ ಸಾಧ್ಯತೆಗಳು" ಬಗ್ಗೆ ಎರಡು ದಿನಗಳ ಕಾರ್ಯಗಾರವನ್ನು ಜೂನ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದೆ.

ದಲಿತ ಯುವ ಲೇಖಕಿಯರು, ಆಸಕ್ತ ವಿದ್ಯಾರ್ಥಿನಿಯರು/ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಊಟ, ವಸತಿ ಹಾಗೂ ವಾಸ್ತವಿಕ ಪ್ರಯಾಣ ವೆಚ್ಚವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಒದಗಿಸಲಿದೆ. ತಮ್ಮ ಪರಿಚಯ ಪತ್ರ, ಪಾಸ್‌ಪೋರ್ಟ್ ಗಾತ್ರದ ಫೋಟೋ ಹಾಗೂ ಪ್ರಕಟಿತ ಕವಿತೆ, ಲೇಖನ, ಸಂಕಲನಗಳ ವಿವರಗಳ ಸಮೇತ ಮಾಹಿತಿಯನ್ನು ದಿನಾಂಕ: 31-05-2016 ರೊಳಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002. ಈ ವಿಳಾಸಕ್ಕೆ ಕಳುಹಿಸಿಕೊಡಬಹುದಾಗಿದೆ ಹಾಗೂ ಪ್ರಾಧಿಕಾರದ ಇ-ಮೇಲ್ ವಿಳಾಸ **kannadappradhikara@gmail.com**ರಲ್ಲಿಯು ಸಹ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 080-22484516/22107704 ಅನ್ನು ಅಥವಾ ವೆಬ್‌ಸೈಟ್ **www.kannadapustakapradhikara.com** ಸಂಪರ್ಕಿಸಬಹುದಾಗಿದೆ.

ಬಾಬು:ಪೂರ್ಣಿಮಾ:ಜಿಪಿಆರ್.

# ಜೀತ ಪದ್ದತಿ ನಿರ್ಮೂಲನೆ ನಮ್ಮೆಲ್ಲರ ಕರ್ತವ್ಯ

ಬೆಂಗಳೂರು, ಮೇ 13 (ಕನಾಟಕ ವಾರ್ತೆ)

ಅನ್ನ ಭಾಗ್ಯ ಯೋಜನೆ ಜಾರಿ, ಹಸಿವು ಮುಕ್ತ ರಾಜ್ಯವನ್ನಾಗಿಸುವುದರ ಮೂಲಕ ಸರ್ಕಾರ ಜೀತ ಪದ್ಧತಿ ನಿರ್ಮೂಲನೆ, ಮಾನವ ಹಕ್ಕುಗಳ ರಕ್ಷಣೆ ಮಾಡಿದೆ ಆ ಮೂಲಕ

ನಮ್ಮ ಪ್ರಗತಿ ಹಿರಿಮೆ ಹೆಚ್ಚಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಹೆಚ್. ಕೆ. ಪಾಟೀಲ್ ಅವರು ಹೇಳಿದರು.

ಅವರು ಇಂದು ವಿಕಾಸ ಸೌಧದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ನವದೆಹಲಿ ಹಾಗೂ ಕರ್ನಾಟಕ ಸರ್ಕಾರ ಜಂಟಿಯಾಗಿ ಆಯೋಜಿಸಿದ್ದ ಜೀತಪದ್ಧತಿ ನಿರ್ಮೂಲನೆ ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸರ್ಕಾರವಾಗಲಿ, ಅಧಿಕಾರಿಗಳಾಗಲಿ ಜೀತ ಪದ್ಧತಿ ಇನ್ನೂ ಇದೆ ಎಂದರೆ ಒಪ್ಪುವುದಿಲ್ಲ. ಆದರೆ ಎನ್.ಜಿ.ಓ ಗಳು, ಇತರ ಸಂಘ ಸಂಸ್ಥೆಗಳು ಉತ್ತರ ಕರ್ನಾಟಕವೂ ಸೇರಿದಂತೆ, ಅಲ್ಲಲ್ಲಿ ಜೀತ ಪದ್ಧತಿ ಇರುವುದನ್ನು ಪರಿಶೀಲಿಸಿ ಸರ್ಕಾರದ ಕಣ್ಣು ತೆರೆಸಿವೆ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡು, ಚಿಂತನೆ ನಡೆಸಿ ಸಂಘ ಸಂಸ್ಥೆಗಳ ಪದಾದಿಕಾರಿಗಳನ್ನು ಒಳಗೊಂಡಂತೆ ಜೀತ ಪದ್ಧತಿ ನಿರ್ಮೂಲನಾ ಸಮಿತಿಯನ್ನು ರಚಿಸಿತು. ಸಮಿತಿಯು ಸುಮಾರು 8 ತಿಂಗಳ ಕಾಲ ಕೆಲಸ ಮಾಡಿ 22 ಶಿಫಾರಸ್ಸು ಕೊಟ್ಟಿದ್ದಾರೆ. ಸಮಿತಿಯ ಶಿಫಾರಸ್ಸುಗಳ ಮೇಲೆ ಹೆಚ್ಚಿನ ಬೆಳಕುಚೆಲ್ಲುವ ಮೂಲಕ ಮುಂದಿನ ದಿನಗಳಲ್ಲಿ ಜೀತ ಪದ್ಧತಿ ಸಂಪೂರ್ಣವಾಗಿ ನಿರ್ನಾಮವಾಗುವಂತೆ ಮಾಡಲಾಗುವುದು ಎಂದರು.

ಜೀತದಿಂದ ಮುಕ್ತಿಕಾಣಲು ಸಂಘ ಸಂಸ್ಥೆಗಳು ಗುರುತಿಸಿರುವ ಸುಮಾರು 700 ಅರ್ಜಿಗಳು ಸರ್ಕಾರದ ಹಂತದಲ್ಲಿ ಉಳಿದಿದ್ದು, ಅದನ್ನು ನಿಗದಿತ ಒಂದು ಸಮಯವನ್ನು ಇಟ್ಟುಕೊಂಡು ಅಂದರೆ ಬರುವ ಜೂನ್ 30 ರೊಳಗೆ ವಿಲೇವಾರಿ ಮಾಡುವ ಮೂಲಕ ಅವರಿಗೆ ಉತ್ತಮ ಬದುಕು ಕೊಡುವಂತಾಗಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜೀತ ಪದ್ಧತಿಯಿಂದ ಮುಕ್ತಗೊಳ್ಳುವವವರಿಗೆ ಅವರ ಭವಿಷ್ಯಕ್ಕಾಗಿ ಕೇಂದ್ರ ಸರ್ಕಾರದಿಂದ 10 ಸಾವಿರ ರೂ., ರಾಜ್ಯ ಸರ್ಕಾರದಿಂದ 10 ಸಾವಿರ ರೂ. ನೀಡುತ್ತಿದೆ. ಆದರೆ ಆ ಹಣವೂ ಸಕಾಲಕ್ಕೆ ಫಲಾನುಭವಿಗಳಿಗೆ ತಲುಪುತ್ತಿಲ್ಲ, ಹೀಗಾಗಿ ಅವರ ಸ್ಥಿತಿ ಅತಂತ್ರವಾಗುತ್ತದೆ. ಆದ್ದರಿಂದ ಈ ಮೊತ್ತವನ್ನು ಏರಿಕೆ ಮಾಡುವುದರ ಅವರಿಗೆ ಸಕಾಲದಲ್ಲಿ ವಿತರಣೆಯಾಗುವಂತಾಗಬೇಕು, ಆಶ್ರಯ, ಡಾ॥ ಅಂಬೇಡ್ಕರ್ ವಸತಿ ಯೋಜನೆ, ಇಂದಿರಾ ಆವಾಜ್ ಯೋಜನೆಗಳಡಿ ಅವರಿಗೆ ವಸತಿ ಮತ್ತಿತರ ಸವಲತ್ತುಗಳಾದ ಕಲ್ಪಿಸುವಂತಾಗಬೇಕು ಎಂದರು.

ಸಭೆಯಲ್ಲಿ ಭಾಗವಹಿಸಿದ್ದ ಕಾರ್ಮಿಕ ಸಚಿವ ಪಿ.ಟಿ. ಪರವೇಶ್ವರನಾಯಕ್ ಅವರು ಜೀತ ಪದ್ಧತಿ, ಬಾಲ ಕಾರ್ಮಿಕ ಪದ್ಧತಿಗಳ ನಿರ್ಮೂಲನೆಗೆ ಸರ್ಕಾರ ಹಾಗೂ ತಮ್ಮ ಇಲಾಖೆ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತದೆ. ಇಂತಹಾ ಪದ್ಧತಿಗಳು ಸಮಾಜಕ್ಕೆ ಮಾರಕವಾಗಿವೆ ಸರ್ಕಾರದ ಜೊತೆಗೆ ಸಂಘ ಸಂಸ್ಥೆಗಳು, ಎನ್.ಜಿ.ಓ ಗಳು ಹಾಗೂ

ನಾಗರೀಕರೂ ಇದರಲ್ಲಿ ಕೈ ಜೋಡಿಸುವ ಮೂಲಕ ಇದರ ನಿರ್ಮೂಲನೆಗೆ ಸಹಕರಿಸಬೇಕು ಎಂದರು.

ಕಾರ್ಯಾಗಾರದಲ್ಲಿ ಭಾವಹಿಸಿದ್ದ ಎನ್.ಹೆಚ್.ಆರ್.ಸಿ ನಿರ್ದೇಶಕ ಸಂಜಯ್ ದುಬೆ ಮಾತನಾಡಿ ಫಂಡಮೆಂಟಲ್ ರೈಟ್ಸ್ ಆಕ್ಟ್‌ನಲ್ಲಿ ಬದಲಾವಣೆ ಅಗತ್ಯ ಎಂದರು.

ಪ್ರಾಸ್ತಾವಿಕವಾಗಿ ಕಾರ್ಯಾಗಾರದ ರೂಪುರೇಷೆಗಳ ಬಗ್ಗೆ ಡಾ. ಸಂಜಯ್ ದುಬೆ , ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ನಿರ್ದೇಶಕರು ವಿವರಿಸಿದರು , ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ನಾಗಾಂಬಿಕಾದೇವಿರವರು ಕಾರ್ಯಾಗಾರಕ್ಕೆ ಆಗಮಿಸಿದವರಿಗೆ ಸ್ವಾಗತಿಸಿದರು, ಇಲಾಖೆಯ ನಿರ್ದೆಶಕರಾದ ಕೃಷ್ಣಪ್ಪರವರ ಪಾರ್ಥನೆಯೊಂದಿಗೆ ಕಾರ್ಯಾಗಾರ ಆರಂಭವಾಯಿತು. ಈ ಕಾರ್ಯಾಗಾರದಲ್ಲಿ ಮುಖ್ಯ ಕಾರ್ಯದರ್ಶಿಗಳಾದ ಅರವಿಂದ ಜಾಧವ್, ರಾಜ್ಯ ಮಾನವ ಹಕ್ಕುಗಳ ಆಯೋಗದ ಅದ್ಯಕ್ಷರಾದ ಶ್ರೀಮತಿ ಮೀರಾ ಸಕ್ಸೇನಾ, ಕಾರ್ಮಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಸಂಜೀವ್ ಕುಮಾರ್, ವಿವಿಧ ಜಿಲ್ಲೆಗಳಿಂದ ಆಗಮಿಸಿದ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಮುಂತಾದ ಅಧಿಕಾರಿ ಸಿಬ್ಬಂದಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.
ಬಾಬು/ಪಿಎಸ್ ಐ/ಕೆಎಂ